<table>
<tr><td colspan="4">ಕರ್ನಾಟಕ ಸರ್ಕಾರ (ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ. 1397-24</td></tr>
<tr><td></td><td>ಸಿ.ಡಬ್ಲೂ</td><td>11</td></tr>
<tr><td></td><td>ಪಿ.ಡಬ್ಲೂ</td><td>9</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ಶಿವಕುಮಾರ್ ಎಸ್ ಬಿನ್ ಲೇಟ್ ಶಿವಣ್ಣ</td></tr>
<tr><td>ವಯಸ್ಸು</td><td colspan="3">40 ವರ್ಷ</td></tr>
<tr><td>ಉದ್ಯೋಗ</td><td colspan="3">ಹೆಚ್ ಸಿ ಗ್ರಾಮಾಂತರ ವೃತ್ತ ಕಛೇರಿ, ಚನ್ನಪಟ್ಟಣ</td></tr>
<tr><td>ವಾಸಸ್ಥಳ</td><td colspan="3">ರಾಮನಗರ</td></tr>
</table>

**ದಿನಾಂಕಃ- 03.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1) 2022 ರಿಂದ ಚನ್ನಪಟ್ಟಣ ಗ್ರಾಮಾಂತರ ವೃತ್ತ ಕಛೇರಿಯಲ್ಲಿ ಈಗಲೂ ಸಹ ಹೆಚ್.ಸಿ. ಆಗಿ ಕರ್ತವ್ಯ ಮಾಡುತ್ತಿದ್ದೇನೆ.

2) ದಿಃ26.09.2023 ರಂದು ಚಾಸಾ.15 ರವರು ಈ ಪ್ರಕರಣದಲ್ಲಿ ಆರೋಪಿ ಪತ್ತೆಗಾಗಿ ಚಾಸಾ.10, 12 ಮತ್ತು ನನ್ನನ್ನು ನೇಮಕ ಮಾಡಿದ್ದರು. ಬಾತ್ಮಿದಾರರಿಂದ ನಾವು ಮಾಹಿತಿ ಪಡೆದು ಅದರ ಮೇರೆಗೆ ಆರೋಪಿತನು ಯಲಹಂಕದಲ್ಲಿನ ತನ್ನ ಅಜ್ಜಿಯ ಮನೆಯಲ್ಲಿ ಇರುವುದಾಗಿ ತಿಳಿದು ನಾವು ಸದರಿ ಊರಿಗೆ ಹೋಗಿ ಆರೋಪಿತನನ್ನು ದಿಃ27.09.2023 ರಂದು ಬೆಳಿಗ್ಗೆ 07.00 ಗಂಟೆ ಸಮಯದಲ್ಲಿ ಹಿಡಿದು ವಿಚಾರಣೆ ಮಾಡಿ ನಂತರ ಆತನನ್ನು ಚಾಸಾ.15 ರವರ ಮುಂದೆ ಬೆಳಿಗ್ಗೆ 10.00 ಗಂಟೆ ಸಮಯಕ್ಕೆ ಹಾಜರುಪಡಿಸಿದ್ದೆವು. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುತ್ತೇನೆ.

**ಮರುವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ಆರೋಪಿ ಪರ ಶ್ರೀ. ಎಂ.ಟಿ.ಎಸ್. ವಕೀಲರಿಂದ.**

1) ಆರೋಪಿತನನ್ನು ವಶಕ್ಕೆ ತೆಗೆದುಕೊಂಡ ಸಮಯದಲ್ಲಿ ಆತನನಿಂದ ನಾವು ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ನಾನು ಹೇಳಿದಂತೆ ಆರೋಪಿತನನ್ನು ಹಿಡಿದಿಲ್ಲ ಮತ್ತು ಆತನನ್ನು ಚಾಸಾ.15 ರವರ ಮುಂದೆ

ಹಾಜರುಪಡಿಸಿಲ್ಲ, ಆದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

**ಓ.ಹೇ.ಕೆ.ಸರಿ ಇದೆ.**

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು**
**ಚನ್ನಪಟ್ಟಣ**